ನೋಡು, ದಾನ ಅಂದರೆ ಇದನ್ನ ಮಮ ಅರ್ಥಾತ್ ನಿಂಗೆ ಕೊಟ್ಟೆ ಇದಿನ್ನು ನನ್ನದಲ್ಲ ಅಂತ. ಆದರಿಲ್ಲಿ ನಾನೂ ಸುಖಾನುಭವ ಪಡೆದದ್ದು ಸುಳ್ಳಲ್ಲವಲ್ಲ. ನನ್ನದಲ್ಲ ಅಂತ ಏನು ಕೊಟ್ಟೆ? ನನ್ನದಾಗೇ ಇದೆಯಲ್ಲ. ಆ ಕುರಿ ಗಡ್ಡದವ ಇಷ್ಟೆಲ್ಲ ಮಾಡಿದ ಅನಂತರ ನನ್ನ ಗುರಿ ಸಾಪಾಗಿದೆ. ಸುಮ್ಮನೆ ಏನೇನೋ ಚಿಂತಿಸ್ತಾ ಕೂರಬೇಡ' ಅವನ ಮುಖವನ್ನು ಎದೆಗೆ ಗಾಢವಾಗಿ ಅಪ್ಪಿಕೊಂಡಳು.

ಹಾಸಿನಿ ಎಲ್ಲದರಲ್ಲೂ ಚುರುಕು. ಅದೇ ಜಾಗದಲ್ಲಿ ಬೇಡ; ಮೇಲಿಂದ ಪೈಪೋಟಿಯಾಗಿ ಅದೇ ಉದ್ಯಮವೂ ಬೇಡ ಅಂತ ಸಲಹೆ ನೀಡಿದ್ದಕ್ಕೆ ಪರಮಶಿವಯ್ಯ ಒಪ್ಪಿ ಈ ಇಲೆಕ್ಟ್ರೋಪ್ಲೇಟಿಂಗ್ ಉದ್ಯಮವನ್ನು ಮೂವರೂ ಸೇರಿ ಆರಿಸಿದ್ದಾಗಿತ್ತು. ಈ ಉದ್ಯಮದಲ್ಲಿ ಆರೋಗ್ಯಕ್ಕೆ ಹಿತವಲ್ಲದ ತ್ಯಾಜ್ಯ ಹೊರಬೀಳುವುದು ಜಾಸ್ತಿ. ಹೀಗಾಗಿ, ಯಲಹಂಕದ ಹೊರವಲಯದ ಈ ಜಾಗವನ್ನು ಆರಿಸಿದ್ದು. ಮ್ಯಾನೇಜ್ ಮಾಡುವ ಕಲೆ ಅವಳಿಗೆ ಜನ್ಮಜಾತವಾಗಿ ಬಂದದ್ದು. ಮನೆಯಲ್ಲಿ ಕುಳಿತಿರಲು ಇಷ್ಟವಿಲ್ಲದೆ ಚೇಂಬರಿನಲ್ಲೆ ಪಾರ್ಟಿಶನ್ ಮಾಡಿ ಮಾರ್ಕೆಟಿಂಗ್‌ನಲ್ಲಿ ಆಸಕ್ತಿ ವಹಿಸಿದ್ದಳು. ಬಾಗಿಲು ಪೀಠೋಪಕರಣಗಳಲ್ಲಿ ಬಳಸುವ ವಸ್ತುಗಳಿಗೆ ಹಿತ್ತಾಳೆಯ ಲೇಪನ, ಬಂಗಾರ ಬೆಳ್ಳಿಯ ಲೇಪನಗಳ ಆಭರಣಗಳು, ಯಂತ್ರಗಳಲ್ಲಿ ಬಳಸುವ ಬಿಡಿಭಾಗಗಳಿಗೆ ಸವಕಳಿನಿರೋಧ ಲೇಪನ ಹೀಗೆ ಬಹಳ ಅವಕಾಶವಿರುವ ಇಲೆಕ್ಟ್ರೋಪ್ಲೇಟಿಂಗ್ ಉದ್ಯಮ. ತಾಮ್ರ, ಸತು, ನಿಕೆಲ್, ಬೆಳ್ಳಿ, ಹೀಗೆ ಬೆಲೆಬಾಳುವ

